2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 121/2014</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರಫೀಕ್ | ಪಿಡಬ್ಲೂ - 03 |
| ತಂದೆಯ ಹೆಸರು | - | ಮುಷರಬ್ಬ | ಸಿಡಬ್ಲೂ - 03 |
| ವಯಸ್ಸು | - | 42 ವರ್ಷ | |
| ಉದ್ಯೋಗ | - | ಆಟೋ ಚಾಲಕ | |
| ವಾಸ ಸ್ಥಳ | - | ಜೋಕಟ್ಟೆ, ಬೋಟ್ ಹೌಸ್, ಮಂಗಳೂರು | |

ದಿನಾಂಕಃ **21.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

<u>ಮುಖ್ಯ ವಿಚಾರಣೆ **:** ಸರ್ಕಾರಿ ಅಭಿಯೋಜಕರಿಂದ**-**</u>

1. ಮೃತ ಕಬೀರ್ ಗೊತ್ತು. ಆರೋಪಿ ಗೊತ್ತು.
2. 2014 ರಲ್ಲಿ ಒಂದು ದಿನ ನಾನು, ಪ್ರಮೋದ್, ಸರ್ಫರಾಜ್, ಉಮರ್ ಪಾರೂಕ್ ಹಾಗೂ ಮೃತ ಕಬೀರ್ ಸೇರಿ ಮಂಗಳೂರಿನಿಂದ ಹೊಸೂರಿಗೆ ಪಿಕಪ್ ವಾಹನದಲ್ಲಿ ದನ ತರಲು ಹೋಗಿದ್ದೆವು. ನಾವು ರಾತ್ರಿ ಸುಮಾರು 12.30 ಕ್ಕೆ ಹೊಸೂರಿಗೆ ತಲುಪಿದೆವು.
3. ಹೊಸೂರಿನಲ್ಲಿ 20 ದನಗಳನ್ನು ನಮ್ಮ ಪಿಕಪ್ ವಾಹನದಲ್ಲಿ ತುಂಬಿಸಿದೆವು. ಅಲ್ಲಿಂದ ನಾವು ಮಂಗಳೂರಿಗೆ ಹೊರಟೆವು. ಮಂಗಳೂರಿಗೆ ಹೋಗುವಾಗ ತನಿಕೋಡು ಪಾರೆಸ್ಟ ಚೆಕ್ ಪೋಸ್ಟ ಹತ್ತಿರ ಬಂದೆವು. ಚೆಕ್ ಪೋಸ್ಟಿನಲ್ಲಿ ನಮ್ಮ ಪಿಕಪ್ ವಾಹವನ್ನು ನಿಲ್ಲಿಸಿದೆವು. ನಾನು ಚೆಕ್ ಪೋಸ್ಟಿನಲ್ಲಿ ಪಾಸ್ ಪಡೆದುಕೊಳ್ಳಲು ಹೋದೆ. ಆಗ ಆರೋಪಿ ಪಿಕಪ್ ವಾಹನದಲ್ಲಿ ಏನು ಲೋಡ್ ಮಾಡಿದ್ದೀರಿ ಎಂದು ಮೃತ ಕಬೀರನನ್ನು ಕೇಳಿದರು. ಮೃತ ಕಬೀರ್ ಆರೋಪಿಗೆ ಪಿಕಪ್ ವಾಹನದಲ್ಲಿ ದನಗಳನ್ನು ಲೋಡ್ ಮಾಡಲಾಗಿದೆ ಎಂದು ಹೇಳಿದ.

4. ಆಗ ಆರೋಪಿ ನೀವು ದನಗಳನ್ನು ಕದ್ದು ಕೊಂಡು ಬಂದಿದ್ದೀರಿ ಎಂದು ತಂದೆ ತಾಯಿಗಳನ್ನು ಉದ್ದೇಶಿಸಿ ಬೈದರು, ದೇಶದ್ರೋಹಿಗಳು ಎಂದು ಸಹ ಬೈದರು, ಆಗ ಕಬೀರ್ ನಾವು ದೇಶದ್ರೋಹಿಗಳಲ್ಲ ಏಕೆ ಅಪ್ಪ ಅಮ್ಮನಿಗೆ ಬೈಯ್ಯುತ್ತೀರ ಎಂದು ಕೇಳಿದ. ಅದಕ್ಕೆ ಆರೋಪಿ ಶೂಟ್ ಮಾಡುತ್ತೇನೆ ಎಂದು ಹೇಳಿದ. ಮೃತ ಕಬೀರ್ ಓಡಿಹೋಗುತ್ತಿದ್ದಾಗ ಆರೋಪಿ ಗುಂಡು ಹಾರಿಸಿದ. ನಾವು ಮೃತನು ಬಿದ್ದಿರುವುದನ್ನು ನೋಡಿ ಅಲ್ಲಿಂದ ಓಡಿಹೋದೆವು. ಕಾಡಿನ ದಾರಿಯಿಂದ ಹೋಗಿ ಮುಂದೆ ರಸ್ತೆ ತಲುಪಿ ಬೇರೆ ವಾಹನದಲ್ಲಿ ನಮ್ಮೂರಿಗೆ ಹೋದೆವು. ನಂತರ ಕಬೀರ ಮರಣಹೊಂದಿರುವ ವಿಚಾರ ತಿಳಿಯಿತು. ಈ ಬಗ್ಗೆ ಪೋಲೀಸರು ನನ್ನ ಹೇಳಿಕೆ ಪಡೆದಿದ್ದಾರೆ.

(ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ